ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 544/2019

ಸಿ.ಡಬ್ಲ್ಯೂ -9, ಪಿ.ಡಬ್ಲ್ಯೂ-9

ದಿಃ **18.03.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಲವ ಎಂ ಆರ್ |
| ಗಂಡ/ತಂದೆಯ ಹೆಸರು | ರಾಮೇಗೌಡ |
| ವಯಸ್ಸು | 44 ವರ್ಷ |
| ಕೆಲಸ | ಪೊಲೀಸ್ ಇನ್ಸ್‌ಪೆಕ್ಟರ್ |
| ವಾಸಸ್ಥಳ | ಮೈಸೂರು |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ನಾನು 05.12.2015 ರಿಂದ 20.06.2016 ರವರೆಗೆ ಬಿಳಿಕೆರೆ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ21.02.2016 ರಂದು ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ8 ರವರಿಂದ ಪಡೆದಿರುತ್ತೇನೆ. ದಿಃ20.05.2016 ರಂದು ಚಾಸಾ7 ರವರಿಂದ ಗಾಯಾಳು ಚಾಸಾ1 ರವರ ಗಾಯದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ಸಾಕ್ಷಿ ನಿಪಿ5 ರಲ್ಲಿರುರ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ5(ಬಿ)** ಎಂದು ಗುರುತಿಸಲಾಯಿತು. ದಿಃ25.05.2016 ರಂದು ಚಾಸಾ1 ರವರಿಗೆ ನಿಪಿ5 ರಲ್ಲಿ ನಮೂದಿಸಿರುವ ಗಾಯಗಳ ಪೈಕಿ 1 ನೇ ಗಾಯ ತೀವ್ರ ಸ್ವರೂಪದ ಗಾಯವಾದ ಕಾರಣ ಹೆಚ್ಚುವರಿ ಅಭಿಪ್ರಾಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ದಿಃ20.06.2016 ರಂದು ನಾನು ವರ್ಗಾವಣೆಗೊಂಡ ಕಾರಣ ತನಿಖೆಯನ್ನು ಚಾಸಾ10 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲು ಆರೋಪಿತರ ಪರ ಶ್ರೀ ವಿವಿ ವಕೀಲರಿಂದಃ**

ಆರೋಪಿತರು ಯಾವುದೇ ಹಲ್ಲೆ ಮಾಡಿರುವುದಿಲ್ಲ, ನೀವು ನಿಪಿ5 ನ್ನು ಸೃಷ್ಟಿಸಿ ಸುಳ್ಳು ಗಾಯದ ಪ್ರಮಾಣಪತ್ರ ನೀಡಿರುತ್ತೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.